# ಬುದ್ಧಿ ಕಲಿತ ಮುಂಗೋಪಿ



ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಹಂಪೆಯಲ್ಲಿ ದೊಡ್ಡ ವ್ಯಾಪಾರಿಯೊಬ್ಬನಿದ್ದನು. ಅವನು ವ್ಯವಹಾರದಲ್ಲಿ ಎಷ್ಟು ನಿಪುಣನೋ ಅಷ್ಟೇ ಮುಂಗೋಪಿಯಾಗಿದ್ದನು. ಹಾಗಾಗಿ ಯಾರೂ ಅವನೊಂದಿಗೆ ಹಗುರ ಮಾತುಗಳನ್ನಾಡುತ್ತಿರಲಿಲ್ಲ ಮತ್ತು ಚೌಕಾಸೀ ವ್ಯಾಪಾರವನ್ನೂ ಮಾಡುತ್ತಿರಲಿಲ್ಲ. ಅವನು ಮನೆಯಲ್ಲಿ ಹೆಂಡತಿ ಮತ್ತು ಮಕ್ಕಳ ಮೇಲೂ ಇದೇ ರೀತಿ ಕೋಪವನ್ನು ತೋರ್ಪಡಿಸುತ್ತಿದ್ದನು. ಅವರೊಂದಿಗೆ ಒಂದು ದಿನವೂ ಸಂತೋಷವಾಗಿ ಮಾತಾಡುತ್ತಿರಲಿಲ್ಲ.

ಒಂದು ದಿನ ವ್ಯಾಪಾರಿಯು ಊಟಕ್ಕೆಂದು ಮನೆಗೆ ಬಂದಿದ್ದಾಗ, ಅವನ ಹೆಂಡತಿಯು ಅಡುಗೆ ಮಾಡುವ ಅವಸರದಲ್ಲಿ ಸಾರಿಗೆ ಉಪ್ಪು ಹಾಕುವುದನ್ನೇ ಮರೆತುಬಿಟ್ಟಿದ್ದಳು. ಇದರಿಂದ ಸಿಟ್ಟಿಗೆದ್ದ ವ್ಯಾಪಾರಿಯು ಹೆಂಡತಿಯನ್ನು ಹಿಗ್ಗಾಮುಗ್ಗ ಬೈದುದಲ್ಲದೇ ಸೇವಕನನ್ನು ಕರೆದು ಕ್ಷೌರಿಕನನ್ನು ಕರೆತಂದು ಹೆಂಡತಿಯ ತಲೆ ಬೋಳಿಸುವಂತೆ ಆದೇಶ ಮಾಡಿದನು. ಅದರಂತೆ ಮಾಲೀಕನ ಕೋಪಕ್ಕೆ ತುತ್ತಾಗುವ ಭಯದಿಂದ ಸೇವಕನು ಮರುಮಾತಾಡದೇ ಕ್ಷೌರಿಕನನ್ನು ಕರೆತರಲು ಪೇಟೆಬೀದಿಯ ಕಡೆಗೆ ಹೆಜ್ಜೆ ಹಾಕಿದನು. ಈ ವಿಷಯವನ್ನು ದಾರಿಯಲ್ಲಿ ಸಿಕ್ಕ ಅವಳ ಅಣ್ಣಂದಿರಿಗೆ ತಿಳಿಸಿದನು. ವ್ಯಾಪಾರಿಯ ಕೋಪದ ಅರಿವಿದ್ದ ಅವರು ಈ ಗಂಡಾಂತರದಿಂದ ತಮ್ಮ ತಂಗಿಯನ್ನು ಪಾರುಮಾಡುವಂತೆ ಮಂತ್ರಿ ತೆನಾಲಿರಾಮನ ಬಳಿಗೆ ಹೋಗಿ ಬೇಡಿಕೊಂಡರು.

ಸಮಸ್ಯೆಯನ್ನು ಕೂಲಂಕಷವಾಗಿ ಆಲಿಸಿದ ತೆನಾಲಿರಾಮನು ನಾಲ್ಕು ಜನ ಅಣ್ಣಂದಿರನ್ನೂ ಬಳಿಗೆ ಕರೆದು ಕಿವಿಯಲ್ಲಿ ಉಪಾಯವೊಂದನ್ನು ಪಿಸುಗುಟ್ಟಿದನು. ಅವರನ್ನೆಲ್ಲಾ ಬೇಗ ಸಿದ್ಧರಾಗಿ ತಂಗಿಯ ಮನೆಯ ಬಳಿಗೆ ಬರುವಂತೆ ಹೇಳಿ ತಾನೂ ಅಲ್ಲಿಗೆ ತೆರಳಿದನು. ತೆನಾಲಿರಾಮನು ವ್ಯಾಪಾರಿಯ ಮನೆಯ ಬಳಿಗೆ ಬರುವಷ್ಟರಲ್ಲಿ ಆಕೆಯ ನಾಲ್ಕೂ ಅಣ್ಣಂದಿರೂ ಮಡಿಯುಟ್ಟು ಸಿದ್ಧರಾಗಿ ಮನೆಯೊಳಗೆ ಪ್ರವೇಶಿದರು. ಅದೇ ಸಮಯಕ್ಕೆ ಸೇವಕನೂ ಕ್ಷೌರಿಕನನ್ನು ಕರೆದುಕೊಂಡು ಒಳಗೆ ಪ್ರವೇಶಿಸಿದನು.

ತೆನಾಲಿರಾಮನನ್ನು ಕಂಡೊಡನೇ ಗಾಬರಿಯಾದ ವ್ಯಾಪಾರಿಯು ಕಾರಣವೇನೆಂದು ಕೇಳಲು ತೆನಾಲಿರಾಮನು 'ನಮ್ಮ ಹಿಂದೂ ಸಂಪ್ರದಾಯದ ಪ್ರಕಾರ ಒಬ್ಬ ಮಹಿಳೆಗೆ ಕೇಶಮುಂಡನ ಮಾಡಿಸುವುದು ಒಂದೋ ಆಕೆ ದೇವರಿಗೆ ಹರಕೆ ಹೊತ್ತಾಗ ಅಥವಾ ಆಕೆಯ ಗಂಡ ಸತ್ತು ವಿಧವೆಯಾದಾಗ ಮಾತ್ರವೇ, ಆದ್ದರಿಂದ ಕೇಶಮುಂಡನಕ್ಕೂ ಮೊದಲೇ ನಾವು ನಿನ್ನ ಅಂತ್ಯಾದಿ ಕ್ರಿಯೆಯನ್ನು ಮಾಡಲು ಬಂದಿದ್ದೇವೆ' ಎಂದು ಹೇಳಿದನು.

ತೆನಾಲಿರಾಮನ ಮಾತಿನ ಒಳಮರ್ಮವನ್ನರಿತ ವ್ಯಾಪಾರಿಯು ಕೂಡಲೇ ತೆನಾಲಿರಾಮನ ಕಾಲಿಗೆ ಬಿದ್ದು ಕ್ಷಮೆ ಕೇಳಿದನು. ಇನ್ನೆಂದೂ ಕೋಪದ ಕೈಗೆ ಬುದ್ಧಿ ಕೊಡುವುದಿಲ್ಲವೆಂದು ಮಾತು ಕೊಟ್ಟು ಹೆಂಡತಿ ಮತ್ತು ಮಕ್ಕಳೊಂದಿಗೆ ಸುಖವಾಗಿ ಬಾಳಿದನು.

**– ಪ.ನಾ.ಹಳ್ಳಿ.ಹರೀಶ್ ಕುಮಾರ್, ತುಮಕೂರು**

## ನಿಮಗೆಷ್ಟು ಗೊತ್ತು

## ಒಗಟು ಬಿಡಿಸಿ

1. ಮಣಿಗಳ ರಾಣಿ ಮುಟ್ಟಿದರೆ ಉರಿ ಉರಿ
2. ಕತ್ತಲಲ್ಲೂ ಬೆಳಕ ನೀಡುವ ರಾಣಿ
3. ಭೂಮಿಲಿ ಅಡಗಿದ್ದ ಬೆಳ್ಳಿಯ ದೊರೆ
4. ಹಳದಿ ತಾಯಿಗೆ ಕೆಂಪು ಮುತ್ತಿನ ಮಕ್ಕಳು
5. ದಡೂತಿ ಆಸಾಮಿ ದಿನ್ನೆ ಹತ್ತಲಾರ
6. ಬಣ್ಣದ ಎಲೆ ಬಂಗಾರದ ಎಲೆ ಬಡವ ಬಲ್ಲಿದನಿಗೂ ಬೇಕಾದ ಎಲೆ
7. ಸೇವಿಸಿದರೆ ಆರೋಗ್ಯ, ಸೇವನೆಗೆ ಯೋಗ್ಯ
8. ನೂರು ಮಕ್ಕಳ ನುಣ್ಣನೆಯ ತಾಯಿ
9. ಹಸಿರು ಸಿಪಾಯಿಗೆ ಬೆಳ್ಳಿಯ ಟೋಪಿ.
10. ಬೆಳ್ಳಿಗೋಡೆ ಒಳಗೆ ಹಳದಿ ಸಾಮ್ರಾಜ್ಯ.

ಉತ್ತರಗಳು: 1.ಚೇಳು 2. ಮಿಂಚುಹುಳ 3. ಮೂಲಂಗಿ 4. ದಾಳಿಂಬೆ 5. ಕುಂಬಳ 6. ರೂಪಾಯಿ ನೋಟು 7. ಸೇಬು 8.ಸೀಬೆಹಣ್ಣು 9. ಹುರುಳಿ ಹೂವು 10.ಮೊಟ್ಟೆ